# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1506 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾಗಿದ ದಿನಾಂಕ | : | 17-03-2026 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಭದ್ರಾವತಿ ನಗರದಲ್ಲಿ KMRP (Karnataka Municipal Reforms Project) ವತಿಯಿಂದ UGD ನಿರ್ಮಾಣ ಮಾಡಿದ ವರ್ಷ ಹಾಗೂ ಮಂಜೂರಾದ ಅನುದಾನ ಎಷ್ಟು;</td><td>ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC):<br><br>ವಿಶ್ವ ಬ್ಯಾಂಕ್‌ನ ನೆರವಿನಡಿಯಲ್ಲಿ, ಕರ್ನಾಟಕ ಪೌರ ಸುಧಾರಣ ಯೋಜನೆಯ (ಕೆ.ಎಂ.ಆರ್.ಪಿ) ಪೌರ ಬಂಡವಾಳ ಹೂಡಿಕೆ ಘಟಕದಡಿ 32 ನಗರ/ಪಟ್ಟಣಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಸದರಿ ನಗರ ಸ್ಥಳೀಯ ಸಂಸ್ಥೆಗಳನ್ನು 04 ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿರುತ್ತದೆ.<br><br>ಭದ್ರಾವತಿ ನಗರ ಒಳಚರಂಡಿ ಯೋಜನೆಯನ್ನು ಪ್ಯಾಕೇಜ್-1 ರಲ್ಲಿ ಸೇರ್ಪಡಿಗೊಳಿಸಲಾಗಿರುತ್ತದೆ. ಕಾಮಗಾರಿಯ ವಿವರಗಳು ಈ ಕೆಳಕಂಡಂತಿರುತ್ತವೆ:
<table>
<tr><td>ಕಾಮಗಾರಿ ಹೆಸರು</td><td>:</td><td>UGD ನಿರ್ಮಾಣ</td></tr>
<tr><td>ಗುತ್ತಿಗೆದಾರರ ಹೆಸರು</td><td>:</td><td>ಮೆ|| ಅಭಿರಾಮ್ ಇನ್ಫ್ರಾ ಪ್ರೋಜೆಕ್ಟ್ಸ್ ಪ್ರೈ.ಲಿ</td></tr>
<tr><td>ಗುತ್ತಿಗೆ ನೀಡಿದ ದಿನಾಂಕ</td><td>:</td><td>04.10.2012</td></tr>
<tr><td>ಗುತ್ತಿಗೆಯನ್ನು ರದ್ದುಗೊಳಿಸಿದ ದಿನಾಂಕ</td><td>:</td><td>25.10.2018</td></tr>
<tr><td>ಕಾಮಗಾರಿಗೆ ಮಂಜೂರಾದ ಮೊತ್ತ</td><td>:</td><td>ರೂ.23.30 ಕೋಟಿ</td></tr>
</table>
</td></tr>
<tr><td>ಆ)</td><td>ಭದ್ರಾವತಿ Old Town ನಲ್ಲಿ UGD ಗೆ ಬಿಡುಗಡೆಯಾದ ಮತ್ತು ಖರ್ಚಾದ ವೆಚ್ಚ ಎಷ್ಟು;</td><td>ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC):<br><br>ಭದ್ರಾವತಿ Old Town ನಲ್ಲಿ ಒಳಚರಂಡಿ (UGD) ಕಾಮಗಾರಿಗೆ ಬಿಡುಗಡೆಯಾದ ಮೊತ್ತ ಹಾಗೂ ಖರ್ಚಾದ ವಿವರಗಳು ಈ ಕೆಳಗಿನಂತಿರುತ್ತವೆ:
<table>
<tr><td>ಬಿಡುಗಡೆಯಾದ ಮೊತ್ತ</td><td>:</td><td>ರೂ.23.30 ಕೋಟಿ</td></tr>
<tr><td>ಖರ್ಚಾದ ಮೊತ್ತ</td><td>:</td><td>ರೂ.16.60 ಕೋಟಿ</td></tr>
</table>
ಸದರಿ ಯೋಜನೆಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ವಿವರವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಿದೆ.</td></tr>
</table>

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|

| ಕಾಮಗಾರಿಯ ವಿವರ | ಗುರಿ | ಸಾಧನೆ |
|---|---|---|
| ಒಳಚರಂಡಿ ಜಾಲದ ಉದ್ದ-ಕಿ.ಮೀ | 52 | 47.70 |
| ಮ್ಯಾನ್‌ಹೋಲ್‌ಗಳು-ನಂ. | 1510 | 1448 |
| ಮನೆ ಸಂಪರ್ಕ ಜೋಡಣೆ -ನಂ. | 10000 | 6580 |
| ತೇವ ಬಾವಿ - ಸಂಖ್ಯೆ | 3 | 2 |

ಮೇಲ್ಕಂಡ ಕಾಮಗಾರಿಯನ್ನು ಗುತ್ತಿಗೆದಾರರು ಶೇ.75 ರಷ್ಟು ಪೂರ್ಣಗೊಳಿಸಿದ್ದು, ಬಾಕಿ ಕಾಮಗಾರಿಯನ್ನು ಪೂರ್ಣಗೊಳಿಸದಿರುವ ಕಾರಣ ಗುತ್ತಿಗೆ ಕರಾರನ್ನು ದಿನಾಂಕ:25.10.2018 ರಂದು ರದ್ದುಪಡಿಸಲಾಗಿರುತ್ತದೆ.

ಬಾಕಿ ಉಳಿದ ಕಾಮಗಾರಿಯನ್ನು ನಗರಸಭೆ ವತಿಯಿಂದ ಪೂರ್ಣಗೊಳಿಸುವಂತೆ ತಿಳಿಸಿ, ದಿನಾಂಕ:03-07-2019 ರಂದು ನಗರಸಭೆಗೆ ಹಸ್ತಾಂತರಿಸಲಾಗಿದ್ದರಿಂದ ಒಳಚರಂಡಿ ವ್ಯವಸ್ಥೆಯು ನಗರಸಭೆ ಸುಪರ್ದಿಯಲ್ಲಿರುವುದರಿಂದ, ನಗರಸಭೆ ವತಿಯಿಂದ ಒಳಚರಂಡಿ ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿದೆ.

ಮುಂದುವರೆದು, ಕೆ.ಯು.ಡಬ್ಲ್ಯೂ.ಎಸ್.&ಡಿ.ಬಿ. ವತಿಯಿಂದ ಈ ಕೆಳಕಂಡ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಅ) ಅಮೃತ್-1.0 ಯೋಜನೆಯಡಿ ಭದ್ರಾವತಿ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗೆ ರೂ.40.40ಕೋಟಿಗಳ ಅಂದಾಜು ಪಟ್ಟಿಗೆ ದಿನಾಂಕ 16/06/2016 ರಂದು ನಡೆದ 4ನೇ SHPSC ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಯೋಜನೆಗೆ ಬಿಡುಗಡೆಯಾದ ಮೊತ್ತ ರೂ.42.32 ಕೋಟಿಗಳು

ಖರ್ಚಾದ ಮೊತ್ತ ರೂ. 42.22 ಕೋಟಿಗಳು

ಸದರಿ ಯೋಜನೆಯಡಿ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಂಡು ದಿನಾಂಕ 31/12/2021 ರಂದು ಪೂರ್ಣಗೊಳಿಸಲಾಗಿದೆ.

| ವಿವರ | ಪೂರ್ಣಗೊಂಡ ಕಾಮಗಾರಿ |
|---|---|
| ಆಂತರಿಕ ಮಲೀನ ನೀರಿನ ಕೊಳವೆ ಮಾರ್ಗ | 30 ಕಿ.ಮೀ. |
| ಆಳುಗುಂಡಿ ನಿರ್ಮಾಣ. | 1226 ಸಂಖ್ಯೆ |
| ಗೃಹ ಸಂಪರ್ಕ | 4826 ಸಂಖ್ಯೆ. |
| ವೆಟ್‌ವೆಲ್ ಕಮ್ ಪಂಪುಮನೆ ಮತ್ತು ಪಂಪಿಂಗ್ ಮೆಷಿನರಿ | 3 ಸಂಖ್ಯೆ. |
| ಡಿ.ಐ. ಏರು ಕೊಳವೆ ಮಾರ್ಗ | 7.26 ಕಿ.ಮೀ |
| ಮಲೀನ ನೀರು ಶುದ್ಧೀಕರಣ ಘಟಕ ನಿರ್ಮಾಣ | 1.00 ಎಂ.ಎಲ್.ಡಿ. ಸಾಮರ್ಥ್ಯದ ಎಸ್.ಬಿ.ಆರ್. 7.2 ಮತ್ತು 5.83 ಎಂ.ಎಲ್.ಡಿ ಸಾಮರ್ಥ್ಯದ ಡಬ್ಲ್ಯೂ.ಎಸ್.ಪಿ. |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|

ಸದರಿ ಯೋಜನೆಯನ್ನು ಮುಂದಿನ ನಿರ್ವಹಣೆಗಾಗಿ ಭದ್ರಾವತಿ ನಗರಸಭೆ ವತಿಯಿಂದ ದಿನಾಂಕ: 20-06-2022 ರಂದು ಹಸ್ತಾಂತರ ಮಾಡಿಕೊಂಡಿರುತ್ತಾರೆ.

ಆ) ಅಮೃತ್ ಹೆಚ್ಚುವರಿ ಯೋಜನೆಯಡಿ ಭದ್ರಾವತಿ ನಗರದಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗೆ ರೂ.5.00ಕೋಟಿಗಳ ಅಂದಾಜು ಪಟ್ಟಿಗೆ 7ನೇ SHPSC ಸಭೆಯ ನಡುವಳಿ ದಿನಾಂಕ 05/09/2017 ರಲ್ಲಿ ಆಡಳಿತಾತ್ಮಕ ಅನುಮೋದನ ದೊರೆತಿರುತ್ತದೆ.

ಯೋಜನೆಗೆ ಬಿಡುಗಡೆಯಾದ ಮೊತ್ತ ರೂ.5.00 ಕೋಟಿಗಳು
ಖರ್ಚಾದ ಮೊತ್ತ ರೂ. 4.86 ಕೋಟಿಗಳು

ಸದರಿ ಯೋಜನೆಯಡಿ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಂಡು ದಿನಾಂಕ 31/03/2022 ರಂದು ಪೂರ್ಣಗೊಳಿಸಲಾಗಿದೆ.

| ವಿವರ | ಪೂರ್ಣಗೊಂಡ ಕಾಮಗಾರಿ |
|---|---|
| ಡಿ.ಐ. ಏರು ಕೊಳವೆ ಮಾರ್ಗ | 3.40 ಕಿ.ಮೀ. |
| ಗೃಹ ಸಂಪರ್ಕ | 292 ಸಂಖ್ಯೆ. |
| ಪಂಪಿಂಗ್ ಮೆಷಿನರಿ | 3 ಸಂಖ್ಯೆ. |
| ಜಟ್ ಪಟ್ ನಗರದ ವೆಟ್‌ವೆಟ್ ಹತ್ತಿರ ಡಿ.ಜಿ. ರೂಂ ನಿರ್ಮಾಣ ಮತ್ತು ಡಿ.ಜಿ. ಸೆಟ್ ಅಳವಡಿಕೆ<br>7.26 ಕಿ.ಮೀ | |

ಸದರಿ ಯೋಜನೆಯನ್ನು ಮುಂದಿನ ನಿರ್ವಹಣೆಗಾಗಿ ಭದ್ರಾವತಿ ನಗರಸಭೆ ವತಿಯಿಂದ ದಿನಾಂಕ: 16-06-2022 ರಂದು ಹಸ್ತಾಂತರ ಮಾಡಿಕೊಂಡಿರುತ್ತಾರೆ.

ಇ) ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಯೋಜನೆಯಡಿ ನದಿಗೆ ಸೇರುತ್ತಿರುವ ಮಲಿನ ನೀರನ್ನು ಪ್ರತಿಬಂಧಿಸುವ ಮತ್ತು ತಿರುಗಿಸುವ (Interception and Diversion) ಕಾಮಗಾರಿಗೆ ರೂ.10.65ಕೋಟಿಗಳ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ ನಅಇ01 ಯುಡಬ್ಲ್ಯೂಎಲ್ 2019(ಭಾ-3), ಬೆಂಗಳೂರು, ದಿನಾಂಕ 25/03/2021 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ.

ಯೋಜನೆಗೆ ಬಿಡುಗಡೆಯಾದ ಮೊತ್ತ ರೂ.10.65 ಕೋಟಿಗಳು
ಖರ್ಚಾದ ಮೊತ್ತ ರೂ. 9.24 ಕೋಟಿಗಳು

ಸದರಿ ಯೋಜನೆಯಡಿ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಂಡು ದಿನಾಂಕ 29/02/2024 ರಂದು ಪೂರ್ಣಗೊಳಿಸಲಾಗಿದೆ.

| ವಿವರ | ಪೂರ್ಣಗೊಂಡ ಕಾಮಗಾರಿ |
|---|---|
| ಆರ್.ಸಿ.ಸಿ ವಿಯರ್ | 7.00 ಮೀ. |
| ರಿಸಿವಿಂಗ್ ಚೇಂಬರ್ ಮತ್ತು ಪಂಪುಮನೆ | 3 x 3 ಮೀಟರ್ ಮತ್ತು 5 x 5 ಮೀಟರ್ |
| ಡಿ.ಐ ಏರು ಕೊಳವೆ ಮಾರ್ಗ | 200 ಮೀ.ಮೀ ಮತ್ತು 300 ಮೀ.ಮೀ |

| | | |
|---|---|---|
| ಇ) | ಭದ್ರಾವತಿ UGD ಯನ್ನು ಯಾರು ನಿರ್ವಹಣೆ ಮಾಡಬೇಕು; ಇದಕ್ಕೆ ಇರುವ ಮಾನದಂಡಗಳೇನು; | ಸದರಿ ಒಳಚರಂಡಿ ಯೋಜನೆಯನ್ನು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC) ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನಿರ್ವಹಿಸಿ ಒಳಚರಂಡಿ ವ್ಯವಸ್ಥೆಯನ್ನು ನಗರ ಸಭೆಗೆ ಹಸ್ತಾಂತರಿಸಲಾಗಿದ್ದು, ಸದರಿ ನಿರ್ವಹಣೆಯನ್ನು ಭದ್ರಾವತಿ ನಗರ ಸಭೆ ವತಿಯಿಂದ ಕೈಗೊಳ್ಳಲಾಗುತ್ತಿದೆ.<br><br>ಒಳಚರಂಡಿ ವ್ಯವಸ್ಥೆ ನಿರ್ವಹಣೆಯನ್ನು CPHEEO ಮತ್ತು KSPCB/CPCB ರವರ ಮಾನದಂಡಗಳಂತೆ ನಿರ್ವಹಿಸ ಬೇಕಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.<br><br>➢ ಮ್ಯಾನ್‌ಹೋಲ್‌ಗಳ ಅಡಚಣೆಗಳು, ತುಕ್ಕು ಅಥವಾ ಸೋರಿಕೆಗಳನ್ನು ನಿಯಮಿತವಾಗಿ ಪರಿಶೀಲಿಸುವುದು.<br>➢ ಮರದ ತುಂಡುಗಳು/ಬೇರುಗಳು, ಗ್ರೀಸ್, ಹೂಳು ಮುಂತಾದ ಅಡಚಣೆಗಳನ್ನು Hydraulic Jetting ನಂತಹ ವಿಧಾನಗಳನ್ನು ಬಳಸಿಕೊಂಡು ತೆಗೆದುಹಾಕುವುದು.<br>➢ ಕಾಲಕಾಲಕ್ಕೆ ಮ್ಯಾನಹೋಲ್‌ಗಳನ್ನು ಸ್ವಚ್ಛಗೊಳಿಸುವುದು ಮ್ಯಾನ್ ಹೋಲ್ ಕವರ್‌ಗಳನ್ನು ಬದಲಾಯಿಸುವುದು ಮತ್ತು ರಸ್ತೆ ಮಟ್ಟಕ್ಕೆ ಹೊಂದಾಣಿಕೆಯಾಗುವಂತೆ ಮ್ಯಾನ್‌ಹೋಲ್‌ಗಳ ಎತ್ತರವನ್ನು ಹೊಂದಿಸುವುದು.<br>➢ ತುರ್ತು ಪರಿಸ್ಥಿತಿಯಲ್ಲಿ, ಹಾಳಾಗಿರುವ ಪೈಪುಗಳು, ಲಿಫ್ಟ್ ಸ್ಟೇಷನ್ ವೈಫಲ್ಯಗಳು ಅಥವಾ ಇತರೆ ಪ್ರಮುಖ ಅಡಚಣೆಗಳನ್ನು ತುರ್ತಾಗಿ ನಿರ್ವಹಿಸುವುದು.<br>➢ ಮ್ಯಾನ್‌ಹೋಲ್‌ಗಳಲ್ಲಿ ವಿಷಕಾರಿ ಅನಿಲಗಳನ್ನು ತಡೆಗಟ್ಟಲು ಸರಿಯಾದ ಗಾಳಿ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳುವುದು.<br>➢ ಪಂಪ್‌ಗಳಿಗೆ ನಿರಂತರ ವಿದ್ಯುತ್ ಸರಬರಾಜನ್ನು ನಿರ್ವಹಿಸುವುದು.<br>➢ ಸಂಸ್ಕರಣ ಘಟಕದಲ್ಲಿ ಸಂಗ್ರಹವಾದ ಕೆಸರನ್ನು ತೆಗೆದುಹಾಕುವುದು. |
| ಈ) | ಭದ್ರಾವತಿ Old Town ನಗರ ಪ್ರದೇಶದಲ್ಲಿ UGD ಯಲ್ಲಿ ಸಮಸ್ಯೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದ ಕ್ರಮವೇನು? | ಬಂದಿರುತ್ತದೆ.<br><br>ಭದ್ರಾವತಿ ನಗರದಲ್ಲಿ KMRP ಯೋಜನೆಯಡಿ ನಿರ್ಮಿಸಿರುವ ಒಳಚರಂಡಿ ವ್ಯವಸ್ಥೆಯ ಹಾಲಿ ಸ್ಥಿತಿಯ ಮೌಲ್ಯ ಮಾಪನಾ (Conditional Assessment) ಮಾಡಲು ಮತ್ತು ಬಿಟ್ಟು ಹೋಗಿರುವ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ವಿಸ್ತೃತ ಯೋಜನಾ ವರದಿ ತಯಾರಿಸಲು ಸರ್ವೇ ಕಾರ್ಯವನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. |

**ಕಡತ ಸಂಖ್ಯೆ:ನಅಇ 38 ಪಿಆರ್‌ಜೆ 2026**

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು